# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ತಿಪಟೂರು

## ಸಿ.ಸಿ. ನಂ. **158/2023**

ಸಿ.ಡಬ್ಲ್ಯೂ: **15**
ಪಿ.ಡಬ್ಲ್ಯೂ: **6**

ದಿಃ **15.10.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಮಾರ್ಕಂಡಯ್ಯ |
| ತಂದೆ ಹೆಸರು | : | ಲೇಟ್ ತಿಮ್ಮಪ್ಪ |
| ವಯಸ್ಸು | : | **45** ವರ್ಷ |
| ಉದ್ಯೋಗ | : | ಸಿಪಿಐ ಹುರಿಗಾಂ ವೃತ್ತ, |
| ವಾಸ ಸ್ಥಳ | : | ಕೆ ಜಿ ಎಫ್ |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು ದಿಃ 03-02-2023 ರಿಂದ ದಿಃ 07-06-2023 ರ ತನಕ ನಾನು ತಿಪಟೂರು ನಗರ ಪೊಲೀಸ್ ಠಾಣೆಯಲ್ಲಿ ಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 14-03-2023 ರಂದು ಸಂಜೆ **6** ಗಂಟೆಗೆ ಈ ಪ್ರಕರಣದ ಚಾಸಾ-**1** ಠಾಣೆಗೆ ಹಾಜರಾಗಿ ನೀಡಿರುವ ಲಿಖಿತ ದೂರಿನ ಮೇರೆಗೆ ಠಾಣಾ ಗುನ್ನೆ ನಂ. **44/2023** ಕಲಂ. **279, 304(**ಎ**)** ಐಪಿಸಿ ರೀತ್ಯ ಪ್ರಕರಣವನ್ನು ದಾಖಲು ಮಾಡಿಕೊಂಡು ಪ್ರ.ವ. ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-**1** ಎಂದು ಗುರುತಿಸಲಾಗಿರುತ್ತದೆ ಸಾಕ್ಷಿಯ ಸಹಿಯನ್ನು ನಿಪಿ-**1(**ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**10** ಎಂದು ಹಾಗೂ ಸಾಕ್ಷಿಯ ಸಹಿಯನ್ನು

ನಿಪಿ-**10**(ಎ) ಎಂದು ಗುರುತಿಸಲಾಯಿತು.

ಅದೇ ದಿನ ತಿಪಟೂರು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಮೃತನ ಶವ ತನಿಖೆಯನ್ನು ಪಂಚರ ಸಮಕ್ಷಮ ನಿಪಿ-**11** ರಂತೆ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-**11(**ಎ**)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಮೃತನ ಸಂಬಂಧಿಕರ ಹೇಳಿಕೆ ಪಡೆದಿರುತ್ತೇನೆ. ನಂತರ ದಿಃ **16-03-2023** ರಂದು ಆರೋಪಿಯು ತೋರಿಸಿದ ಸ್ಥಳದಲ್ಲಿ ಚಾಸಾ-**3** ಮತ್ತು **4** ರವರ ಸಮಕ್ಷಮ ಮಧ್ಯಾಹ್ನ **1** ಗಂಟೆಯಿಂದ **1-45** ಗಂಟೆವರೆವಿಗೂ ಸ್ಥಳ ಮಹಜರ್ ಮಾಡಿರುತ್ತೇನೆ. ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-**9** ಎಂದು ಆಗಿದ್ದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-**9(**ಬಿ**)** ಎಂದು ಗುರುತಿಸಲಾಯಿತು. ಸ್ಥಳದಿಂದ ಅಪಘಾತನ ಮಾಡಿದ ವಾಹನ ಐಟೆನ್ ಕಾರು ಸಂಖ್ಯೆ ಕೆಎ-**05**-ಎಂಎಫ್-**5477** ಮತ್ತು ಅಪಘಾತಕ್ಕೀಡಾದ ಸ್ಪಂಡರ್ ಪ್ಲಸ್ ದ್ವಿಚಕ್ರ ವಾಹನ ಕೆಎ-**01**-ಎಸ್-**8048** ನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ. ದಿಃ **17-03-2023** ರಂದು ಚಾಸಾ-5 ರವರಿಗೆ ಐಎಂವಿ ಕಲಂ. 133 ಅಡಿಯಲ್ಲಿ ನೋಟೀಸು ಕೊಟ್ಟಿದ್ದು ಸದರಿ ನೋಟೀಸಿಗೆ ಅವರು ಉತ್ತರ ಸಹ ನೀಡಿರುತ್ತಾರೆ ಅವುಗಳು ಈಗಾಗಲೇ ನಿಪಿ-5 ಮತ್ತು 6 ಎಂದು ಆಗಿದ್ದು ಸಾಕ್ಷಿಯ ಸಹಿಗಳನ್ನು ನಿಪಿ-5(ಬಿ) ಮತ್ತು 6(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿ ಚಾಲಕನು ನನ್ನ ಮುಂದೆ ಹಾಜರಾಗಿದ್ದು ಆತನನ್ನು ದಸ್ತಗಿರಿ ಕ್ರಮ ಜರುಗಿಸಿ ಸೂಕ್ತ ಜಾಮೀನಿನ ಮೇಲೆ ಬಿಟ್ಟಿರುತ್ತೇನೆ. ಚಾಸಾ-2 ರವರ ಹೇಳಿಕೆ ಪಡೆದಿರುತ್ತೇನೆ. ಚಾಸಾ-1 ರವರ ಮರು ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಎ ಆರ್ ಟಿ ಓ ತಿಪಟೂರು ರವರಿಗೆ ವಾಹನದ ಎಂವಿ ತಪಾಸಣೆ ಮಾಡಲು ಮನವಿ ಮಾಡಿಕೊಂಡಿರುತ್ತೇನೆ. ಐಎಂವಿ ತಪಾಸಣೆ ಬಳಿಕ ಚಾಸಾ-5 ರವರಿಗೆ ಸದರಿ ವಾಹನವನ್ನು ನಿಪಿ-7 ಬಾಂಡ್ ಪಡೆದು ಬಿಟ್ಟಿರುತ್ತೇನೆ. ಸಾಕ್ಷಿಯ ಸಹಿಯು ನಿಪಿ-7(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಂದು ಫೋಟೋ ಸಹ ತೆಗೆದಿದ್ದು ಅವು ಈಗಾಗಲೇ ನಿಪಿ-2 ಮತ್ತು3 ಆಗಿವೆ. ದಿಃ 03-04-2023 ರಂದು ದ್ವಿಚಕ್ರ ವಾಹನವನ್ನು ಚಾಸಾ-6 ರವರಿಗೆ ನಿಪಿ-8 ಬಾಂಡ್ ಪಡೆದು

ಬಿಟ್ಟಿರುತ್ತೇನೆ. ಸಾಕ್ಷಿಯ ಸಹಿಯು ನಿಪಿ-8(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಂದು ಪೋಟೋ ಸಹ ತೆಗೆದಿದ್ದು ಅದು ಈಗಾಗಲೇ ನಿಪಿ-4 ಆಗಿವೆ. ಅದೇ ದಿನ ಐಎಂವಿ ವರದಿಗಳನ್ನು ಪಡೆದಿರುತ್ತೇನೆ. ಅವುಗಳು ನಿಪಿ-13 ಮತ್ತು 14 ಎಂದು ಸಾಕ್ಷಿಯ ಸಹಿಗಳನ್ನು ನಿಪಿ-13(ಎ) ಮತ್ತು 14(ಎ) ಎಂದು ಗುರುತಿಸಲಾಯಿತು. ಅದೇ ದಿನ ಮೃತನ ಪಿಎಂ ವರದಿಯನ್ನು ನಿಪಿ-12 ರಂತೆ ಪಡೆದಿರುತ್ತೇನೆ ಸಾಕ್ಷಿಯ ಸಹಿಯು ನಿಪಿ-12(ಎ) ಎಂದು ಗುರುತಿಸಲಾಯಿತು. ಈ ಪ್ರಕರಣದ ಪೋಟೋಗಳಿಗೆ ಸಂಬಂಧಿಸಿದಂತೆ ಸಾಕ್ಷ್ಯ ಅಧಿನಿಯಮ ಕಲಂ. 65(ಬಿ) ರಡಿಯಲ್ಲಿ ದೃಢೀಕರಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದನ್ನು ನಿಪಿ-15 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯು ನಿಪಿ-15(ಎ) ಎಂದು ಗುರುತಿಸಲಾಯಿತು. ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆ ದಿನ ನಾನು ಬಂಧಿಸಿದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಿದ್ದು ಸಿ.ವಿ ವಕೀಲರು ಆರೋಪಿಯನ್ನು ಗುರುತಿಸಲು ಯಾವುದೇ ತಕರಾರು ಇರುವುದಿಲ್ಲವೆಂದು ಹೇಳುತ್ತಾರೆ.

ಪಾಟೀ ಸವಾಲು ಆರೋಪಿ ಪರ ಶ್ರೀ ಸಿವಿ ವಕೀಲರಿಂದಃ

ದೂರು ಚಾಸಾ-1 ರವರೇ ಟೈಪು ಮಾಡಿಸಿಕೊಂಡು ಸಂಜೆ 6 ಗಂಟೆಗೆ ಬಂದಿದ್ದರು. ದೂರು ದಾಖಲು ಮಾಡುವ ಮೊದಲು ನಮಗೆ ಅಪಘಾತದ ಬಗ್ಗೆ ಯಾವುದೇ ಮಾಹಿತಿ ಬಂದಿರಲಿಲ್ಲ. ಅಪಘಾತ ಆಗಿದೆ ಎಂದು ಹೇಳುವ ಸ್ಥಳದಿಂದ ನಮ್ಮ ಠಾಣೆ ಸುಮಾರು 600-700 ಮೀಟರ್ ಅಂತರದಲ್ಲಿದೆ. ಅಪಘಾತ ಆಗಿದೆ ಎಂದು ಹೇಳುವ ಸ್ಥಳದ ಸಮೀಪ ಇಂಡಸ್ಟ್ರೀಯಲ್ ಏರಿಯಾ ಇದೆ. ಆ ಸ್ಥಳದ ದಕ್ಷಿಣಕ್ಕೆ ರೇಣುಕಾ ಬಾರು ಇದೆ ಎಂದರೆ ನಿಜ. ಬಲಭಾಗಕ್ಕೆ ಅಂಗಡಿ ಮುಂಗಟ್ಟುಗಳು ಇವೆ ಎಂದರೆ ನಿಜ. ಅಪಘಾತದ ಪೂರ್ವಕ್ಕೆ ಮುಂದೆ ಮೂರು ರಸ್ತೆಗಳು ಕೂಡುತ್ತವೆ ಎಂದರೆ ನಿಜ. ಅಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಕೂಡಿಕೊಳ್ಳುತ್ತದೆ

ಎಂದರೆ ಸರಿಯಲ್ಲ. ಆ ಸ್ಥಳದಲ್ಲಿ ಒಂದೇ ಕಡೆ 3 ರಸ್ತೆ ಉಬ್ಬುಗಳು ಹಾಕಲಾಗಿತ್ತು ಎಂದರೆ ಸರಿಯಲ್ಲ. ಅಪಘಾತ ಆಗಿದೆ ಎಂದು ಹೇಳುವ ಸ್ಥಳದಿಂದ 20 ಮೀಟರ್ ಅಂತರದಲ್ಲಿ ಒಂದೇ ಒಂದು ದೊಡ್ಡ ರಸ್ತೆ ಉಬ್ಬು ಇದೆ ಎಂದರೆ ಸರಿಯಲ್ಲ. ಈ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ನಾನು ಆ ಸ್ಥಳಕ್ಕೆ 2 ಸಲ ಭೇಟಿ ನೀಡಿದ್ದೇನೆ. ನಾನು ಘಟನಾ ಸ್ಥಳಕ್ಕೆ ಮೊದಲನೇ ಬಾರಿಗೆ 14-03-2023 ರಂದು ಭೇಟಿ ಕೊಟ್ಟಿರುತ್ತೇನೆ. ಆ ಬಗ್ಗೆ ಲಿಖಿತ ದಾಖಲೆ ಇರುವುದಿಲ್ಲ. ಈ ಪ್ರಕರಣವು ಘೋರ ಅಪರಾಧ ಎಂದರೆ ನಿಜ. ಸಿ.ಆರ್.ಪಿ.ಸಿ ಮತ್ತು ಪೊಲೀಸ್ ಮ್ಯಾನುಯಲ್ ಪ್ರಕಾರ ಘೋರ ಅಪರಾಧ ಆದ ಸ್ಥಳಕ್ಕೆ ಮಾಹಿತಿ ಬಂದ ತಕ್ಷಣ ಭೇಟಿ ನೀಡಬೇಕಾಗುತ್ತದೆ ಎಂದರೆ ನಿಜ. ದೂರು ಕೊಟ್ಟ ದಿನದಿಂದ ಮಹಜರ್ ಮಾಡಿದ ದಿನಕ್ಕೆ 2 ದಿನಗಳ ಅಂತರ ಇದೆ ಎಂದರೆ ನಿಜ. ಮಹಜರನ್ನು ತಡವಾಗಿ ಬರೆಯಲು ಕಾರಣವನ್ನು ಲಿಖಿತವಾಗಿ ನಮೂದು ಮಾಡಿರುವುದಿಲ್ಲ. ಮಹಜರ್ ಗೆ ಸ್ಥಳೀಯರಿಗೆ ಸಾಕ್ಷಿಗಳಾಗಿ ಮಾಡಿರುವುದಿಲ್ಲ. ಆ ರೀತಿ ಸಾಕ್ಷಿಗಳಾಗಿ ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಕಾರು ಮತ್ತು ಬೈಕು ನಡುವೆ ಅಪಘಾತ ಆಗಿದೆ ಎಂದು ಹೇಳಿದ್ದು ಬೈಕಿನ ಹಿಂಬದಿಯಿಂದ ಪೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ಆ ರೀತಿ ತೆಗೆದ ಪೋಟೋವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಅಪಘಾತ ನಡೆದಿದೆ ಎಂದು ಹೇಳುವ ಸ್ಥಳದ ಪೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ಆ ರೀತಿ ತೆಗೆದ ಪೋಟೋವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಿಪಿ-15 ರಲ್ಲಿ ಈ ಪ್ರಕರಣದ ಪೋಟೋಗಳು ಯಾವ ಸಾಧನದಲ್ಲಿ ತೆಗೆಯಲಾಗಿದೆ ಮತ್ತು ಅದನ್ನು ಯಾರು ತೆಗೆದರು ಮತ್ತು ಅದು ಯಾರ ಬಳಿ ಇತ್ತು ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸ್ಕೆಚ್ ಯಾರು ಬರೆದಿದ್ದಾರೆ ಎಂದು ಅದರಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕಾರು ಬೈಕಿಗೆ ಢಿಕ್ಕಿ ಮಾಡಿದ ಬಳಿಕ ಕಂಬಕ್ಕೆ ಢಿಕ್ಕಿ ಮಾಡಿದೆ ಎಂದು ಹೇಳಿದ್ದು ಆ ಕಂಬಕ್ಕೆ ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ದಾಖಲೆ ಪಡೆದಿರುವುದಿಲ್ಲ. ಕಂಬಕ್ಕೆ ಢಿಕ್ಕಿ ಮಾಡಿದರೆ ಯಾವ ರೀತಿ ವಾಹನ ಜಖಂ ಆಗುತ್ತದೆ ಎಂದು ಅಭಿಪ್ರಾಯ

ಪಡೆದಿಲ್ಲ. ದ್ವಿಚಕ್ರ ವಾಹನಕ್ಕೆ ವಿಮೆ ಇತ್ತು. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-2 ಮತ್ತು 3 ಫೋಟೋಗಳಲ್ಲಿ ವಾಹನ ಯಾವುದೋ ಸಮಾರಂಭಕ್ಕೆ ಹೋಗಿ ಬಂದಿರುವ ರೀತಿ ಕಾಣಿಸುತ್ತದೆ ಎಂದರೆ ನಿಜ. ದಿಃ 14-03-2023 ರಿಂದ ದಿಃ 16-03-2023 ರವರೆವಿಗೂ ಅಪಘಾತ ಮಾಡಿದೆ ಮತ್ತು ಅಪಘಾತಕ್ಕೊಳಗಾದ ವಾಹನಗಳು ಯಾರ ವಶದಲ್ಲಿದ್ದವು ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 14-03-2023 ರಂದು ವಾಹನಗಳನ್ನು ಠಾಣೆಗೆ ತರಲು ಯಾವುದೇ ತೊಂದರೆ ಇರಲಿಲ್ಲ. ಸಾಕ್ಷಿಯು ಮಹಜರ್ ಮಾಡುವ ಉದ್ದೇಶಕ್ಕಾಗಿ ಅಲ್ಲಿಯೇ ಬಿಡಲಾಗಿತ್ತು ಎಂದು ಹೇಳುತ್ತಾರೆ. ಅಲ್ಲಿ ಯಾವುದೇ ಸಿಸಿ ಕ್ಯಾಮೆರಾ ಇರಲಿಲ್ಲ. ವಾಹನಗಳು ಠಾಣೆಗೆ ಯಾವ ರೀತಿ ಮತ್ತು ಯಾರು ತಂದಿದ್ದಾರೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾಹನಗಳು ತರುವ ಸಮಯದಲ್ಲಿ ಕೆಲವು ಜಖಂಗಳು ಆಗುತ್ತವೆ ಎಂದರೆ ಸರಿಯಲ್ಲ.

ನಾನು ಸ್ಥಳಕ್ಕೆ ಹೋಗಿಲ್ಲ ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಾಹನ ಅಮಾನತ್ತು ಪಡಿಸಿಕೊಂಡಿಲ್ಲ ಮತ್ತು ನಾನು ಸ್ಥಳ ಪಂಚನಾಮೆಯನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗಳ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಸ್ಥಳಕ್ಕೆ ಭೇಟಿ ನೀಡಿಲ್ಲ ಮತ್ತು ಸ್ಥಳದಲ್ಲಿ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಮೃತನ ಕುಟುಂಬಕ್ಕೆ ಪರಿಹಾರ ಸಿಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತ ಆಗಿದೆ ಎಂದು ಹೇಳುವ ಸ್ಥಳ ಬಿ.ಹೆಚ್ ರಸ್ತೆ ಆಗಿದೆ ಎಂದರೆ ನಿಜ. ಅಲ್ಲಿ ಸಾಕಷ್ಟು ವಾಹನ ಸಂಚಾರ ಇರುತ್ತದೆ ಎಂದರೆ ನಿಜ. ಆ ರೀತಿ ಸಾಕಷ್ಟು ವಾಹನ ಸಂಚಾರ ಇರುವ ಕಾರಣ 2 ದಿನ ನಂತರ ಸ್ಥಳದಿಂದ ಪ್ಲಾಸ್ಟಿಕ್ ಚೂರುಗಳು

ಮತ್ತು ಮೃತನ ಚಪ್ಪಲಿಗಳು ಇರಲು ಸಾಧ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಅ ಚೂರುಗಳು ಯಾವ ವಾಹನಕ್ಕೆ ಸಂಬಂಧಪಟ್ಟಿದೆ ಎಂದು ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ಆ ಚೂರುಗಳು ಈ ವಾಹನಕ್ಕೆ ಸೇರಿವೆ ಎಂದು ತೋರಿಸಲು ಯಾವುದೇ ತನಿಖೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ಚೂರುಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ.

ಮರು ವಿಚಾರಣೆ - ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

(ಮೊಹಮ್ಮದ್ ಆರೀಫುಲ್ಲಾ ಸಿ.ಎಫ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.